


ಎ. ಪೂಷ್ಕಿನ್

ಮೀನುಗಾರ ಮತ್ತು ಹೊನ್ನ ಮೀನು

ಎ. ಪೂಷ್ಕಿನ್

ಮೀನುಗಾರ ಮತ್ತು ಹೊನ್ನ ಮೀನು





ವಾಸಿಸಿದ್ದ ಮುದುಕನೊಬ್ಬ ತನ್ನ ಮಡದಿ ಮುದುಕಿಯೊಡನೆ
ಕಡು ನೀಲಿಯ ಕಡಲ ತಡಿಯಲ್ಲಿ
ವಾಸಿಸಿದ್ದರವರು ಮುರುಕ ಗುಡಿಸಿಲೊಂದರಲ್ಲಿ
ಸಂದಿತ್ತು ಆಗಲೇ ವರುಷ ಮೂವತ್ತು ಮತ್ತೆ ಮೂರು.
ಮುದುಕ ಹಿಡಿಯುತಿದ್ದ ಮೀನು
ಮುದುಕಿ ನೇಯುತಿದ್ದಳು ನೂಲು.
ಒಮ್ಮೆ ಮುದುಕ ಕಡಲಿನಲ್ಲಿ ಬೀಸಿದನು ಬಲೆಯು.
ಎಳೆದು ನೋಡಿದ, ಬಂದುದೇನು – ಬರಿಯ ಕೆಸರು.
ಬೀಸಿದನವ ಬಲೆಯ ಎರಡನೆಯ ಬಾರಿ –
ಈ ಬಾರಿ ಬಂದಿತು ಕೇವಲ ಹುಲ್ಲು ಜೊಂಡು ಪಾಚಿ.
ಮೂರನೆಯ ಬಾರಿಯೂ ಅವ ಬೀಸಿದನು ಬಲೆಯು.
ಸಿಕ್ಕಿ ಬಿದ್ದಿದ್ದಿತು ಬಲೆಯಲೊಂದೇ ಒಂದು ಮೀನು.
ಆದರದು ಸಾಮಾನ್ಯ ಮೀನು ಆಗಿರಲಿಲ್ಲ – ಬಂಗಾರದ್ದಾಗಿತ್ತು.

ಹೇಗೆ ಬೇಡಿಕೊಂಡಿತು ಅದು – ಆ ಹೊನ್ನ ಮೀನು!
ಮನುಜರಂತೆಯೆ ಮಾತನಾಡುತ್ತ:
"ಬಿಟ್ಟುಬಿಡು ನೀನು, ಅಜ್ಜಯ್ಯ, ನನ್ನನ್ನು ಕಡಲಿನೊಳಕೆ!
ಸಿರಿವಂತ ಕೊಡುಗೆಯನು ನಾ ಕೊಡುವೆ ನಿನಗೆ,
ಕೇಳಿದುದನೆಲ್ಲವನು ಕೊಡುವೆ ನಾ ನಿನಗೆ."
ಮುದುಕನಿಗೆ ಆಶ್ಚರ್ಯ, ಗಾಬರಿಯೂ ಆಯಿತು.
ಹಿಡಿಯುತಿದ್ದನು ಅವನು ಮೀನ ವರ್ಷ ಮೂವತ್ತು ಮತ್ತೆ ಮೂರು.
ಮೀನು ಮಾತಾಡುವುದನವನು ಕೇಳಿರಲಿಲ್ಲ ಎಂದೂ.
ಬಿಟ್ಟುಬಿಟ್ಟನು ಅವನು ಹೊನ್ನ ಮೀನನ್ನು,
ಹೇಳಿದನು ಅದಕೆ ಮೃದುವಾಗಿ ಹೀಗೆಂದು:
"ಒಳ್ಳೆಯದು ಮಾಡಲಿ ನಿನಗೆ ದೇವರು, ಹೊನ್ನ ಮೀನೆ!
ನಿನ್ನಿಂದ ನನಗಾವ ಕೊಡುಗೆಯೂ ಬೇಕಿಲ್ಲ.
ಇದ್ದುಕೊಂಡಿರು ನೀನು ನೀಲ ಕಡಲಿನಲಿ.
ಆಡಿಕೊಂಡಿರು ಬೇಕಾದ ಹಾಗೆ ನೀನಲ್ಲಿ."





ಹಿಂದಿರುಗಿದನು ಮುದುಕ ಮುದುಕಿ ಬಳಿಗೆ,
ಹೇಳಿದನು ಅವಳಿಗೆ ಆ ಮಹದಾಶ್ಚರ್ಯ ಘಟನೆಯನು.
“ನಾನಿಂದು ಹಿಡಿದೆ ಮೀನೊಂದನು:
ಹೊನ್ನ ಮೀನದು, ಬರಿಯದಲ್ಲ;
ಮಾತನಾಡಿತು ಅದು ನಮ್ಮಂತೆಯೇ
ನೀಲ ಕಡಲಿನಲಿ ಬಿಟ್ಟುಬಿಡುವಂತೆ ಕೇಳಿಕೊಂಡಿತದು.
ಸಿರಿವಂತ ಕೊಡುಗೆಯನು ಕೊಡುವೆನೆಂದಿತು,
ಕೇಳಿದುದನೆಲ್ಲವನು ಕೊಡುವೆನೆಂದಿತದು.
ನನಗೇಕೆ ಬೇಕದರ ಸಿರಿವಂತ ಕೊಡುಗೆ !
ಬಿಟ್ಟುಬಿಟ್ಟೆನು ಅದನು ನೀಲ ಕಡಲಲ್ಲಿ.”
ಮುದುಕಿ ಮುದುಕನ ಬಯ್ಯತೊಡಗಿದಳು:
“ಮೂರ್ಖ ನೀನು ಅಯ್ಯೋ, ಎಂಥ ತಿಳಿಗೇಡಿ !
ಮೀನಿನಿಂದಲೂ ನೀನು ಕೊಡುಗೆಯನು ಪಡೆಯದೆ ಹೋದೆ !
ಬಟ್ಟೆಯೊಗೆಯಲು ತೊಟ್ಟಿಯೊಂದನು ಕೇಳಬಾರದಿತ್ತೆ –
ನಮ್ಮ ಮನೆಯಲ್ಲಿರುವುದೆಲ್ಲ ತೂತುತೂತಾಗಿಹುದು !”

ಮುದುಕ ಹೊರಟನು ಮತ್ತೆ ನೀಲ್ಗಡಲ ತಡಿಗೆ;
ನೋಡಿದನು – ಕಡಲು ಲಘುವಾಗಿ ಏರಿಳಿಯುತಿತ್ತು.
ಕರೆದನವ ಹೊನ್ನಮೀನನು ಬಳಿಗೆ ಬಾರೆಂದು.
ಬಂದಿತದು ತಪ್ಪದೆಯೆ ಅವನ ಕರೆಗೋಗೊಟ್ಟು:
"ಏನು ಬೇಕು ನಿನಗೆ, ಅಜ್ಜ?" ಕೇಳಿತದು.
ಮುದುಕನದಕೆ ನಮಸ್ಕರಿಸಿ ಹೇಳಿದನು:
"ಕ್ಷಮಿಸೆನ್ನ, ಮಹಾ ಪ್ರಭು, ಮತ್ಸ್ಯರಾಜ.
ಬಯ್ಯುತಿಹಳೆನ್ನನು ನನ್ನ ಮಡದಿ ಮುದುಕಿ.
ಕೊಡುತಿಲ್ಲವೆನಗೊಂದು ನಿಮಿಷವೂ ಶಾಂತಿ:
ಬೇಕಂತೆ ಅವಳಿಗೆ ಬಟ್ಟೆಯೊಗೆಯಲೊಂದು ಹೊಸ ತೊಟ್ಟಿ,
ನಮ್ಮ ಮನೆಯಲ್ಲಿರುವುದೆಲ್ಲ ತೂತು ತೂತಾಗಿಹುದು."
ಹೊನ್ನ ಮೀನಿಂತೆಂದು ಉತ್ತರವ ನೀಡಿತು:
"ಬೇಡ ಚಿಂತೆಯು ನಿನಗೆ, ಹೋಗು ಮನೆಗೆ, ಆಗಲೊಳ್ಳಿತು ನಿನಗೆ.
ಬರಲಿರುವುದು ನಿನಗೊಂದು ಹೊಸ ತೊಟ್ಟಿ."





ಮುದುಕ ಹಿಂದಿರುಗಿದ ಮುದುಕಿ ಬಳಿಗೆ.
ಬಂದಿತ್ತು ಅವರ ಮನೆಗೊಂದು ಹೊಸ ತೊಟ್ಟಿ.
ಮುದುಕಿ ಬಯ್ದಳು ಅವನ ಇನ್ನೂ ಹೆಚ್ಚಾಗಿ.
"ಮೂರ್ಖ ನೀನು. ಅಯ್ಯೋ, ತಿಳಿಗೇಡಿ!
ಕೇಳಿದ್ದೀಯಲ್ಲ ನೀನು, ಮೂರ್ಖ, ಕೇವಲ ತೊಟ್ಟಿಯನ್ನು!
ತೊಟ್ಟಿಯಿಂದುಂಟೇನು ಮಹಾ ಪ್ರಯೋಜನ?
ಹೋಗು, ಮೂರ್ಖ, ಮತ್ತೆ ಮೀನ ಬಳಿಗೆ;
ಕೇಳು ವಂದಿಸಿ ಅದಕೆ, ಮನೆಯೊಂದು ಬೇಕೆಂದು."

ಮತ್ತೆ ಹೋದನು ಮುದುಕ ಕಡಲ ತಡಿಗೆ
(ಈ ಬಾರಿ ನೀಲ್ಗಡಲು ಕ್ಷೋಭೆಗೊಂಡಿತ್ತು).
ತೀರದಲಿ ನಿಂತವನು ಮೀನನ್ನು ಕರೆದ.
ಮೀನು ಕೇಳಿತು, ಅವನ ಬಳಿ ಬಂದು:
"ಬೇಕು ಇನ್ನೇನು ನಿನಗೆ, ಅಜ್ಜಯ್ಯ ?"
ಬಾಗಿ ವಂದಿಸಿ ಮುದುಕ ಉತ್ತರವ ನೀಡಿದ:
"ಕ್ಷಮಿಸೆನ್ನ, ಮಹಾ ಪ್ರಭು, ಮತ್ಸ್ಯರಾಜ !
ಬಯ್ಯುತಿಹಳೆನ್ನನು ಮುದುಕಿ ಇನ್ನೂ ಹೆಚ್ಚಾಗಿ,
ಕೊಡುತ್ತಿಲ್ಲವೆನಗೊಂದು ನಿಮಿಷವೂ ಶಾಂತಿ
ಬೇಕಂತೆ ಅವಳಿಗೆ ಹೊಸತಾದ ಮನೆಯೊಂದು."
ಮೀನು ಹೇಳಿತು ಅದಕೆ ಉತ್ತರವನಿಂತೆಂದು:
"ಬೇಡ ಚಿಂತೆಯು ನಿನಗೆ, ಹೋಗು ಮನೆಗೆ, ಆಗಲೊಳ್ಳಿತು ನಿನಗೆ.
ಹಾಗೆಯೇ ಆಗಲಿ; ಬರಲಿಹುದು ನಿಮಗೆ ಹೊಸ ಮನೆಯೊಂದು."






ಮುದುಕ ಹಿಂದಿರುಗಿದ ತನ್ನ ಗುಡಿಸಲಿಗೆ.
ಆದರಿರಲಿಲ್ಲ ಅವನ ಹಳೆಯ ಗುಡಿಸಲಲ್ಲೆಲ್ಲೂ.
ಅವನ ಮುಂದಿತ್ತು ಹೊಳೆಯುವ ಹೊಸ ಮನೆಯೊಂದು.
ಅದಕಿತ್ತು ಇಟ್ಟಿಗೆಯ ಹೊಗೆಗೂಡು; ಬಳಿದಿತ್ತು ಸುಣ್ಣಬಣ್ಣ.
ಮನೆ ಸುತ್ತ ಬೇಲಿ, ಅದಕೊಂದು ಓಕ್ ಮರದ ಗೇಟು.
ಮುದುಕಿ ಕುಳಿತಿದ್ದಳು ಕಿಟಕಿ ಬಳಿಯೆ.
ಗಂಡನನು ಕಂಡೊಡನೆ ಕೆರಳಿ ಹೇಳಿದಳು:
"ಮೂರ್ಖ ನೀನು, ಶುದ್ಧ ತಿಳಿಗೇಡಿ!
ಕೇಳಿ ಬಂದೆಯಾ ಹೋಗಿ ಬರಿಯ ಮನೆಯನ್ನು!
ಹೋಗು ಮೀನಿನ ಬಳಿಗೆ, ಹೇಳು ವಂದಿಸಿ ಅದಕೆ:
ಬರಿ ರೈತ ಹೆಂಗಸಾಗಿದ್ದು ಬೇಸರ ನನಗೆ
ನಾನಾಗಲಿಚ್ಛಿಸುವೆ ಸಿರಿವಂತ ಒಡತಿ."

ಮತ್ತೆ ಹೋದನು ಮುದುಕ ನೀಲ್ಗಡಲ ತಡಿಗೆ
(ನೀಲ್ಗಡಲು ವಿಪರೀತ ಕ್ಷೋಭೆಗೊಂಡಿತ್ತು)
ಕೂಗಿ ಕರೆದನು ಅವನು ಹೊನ್ನ ಮೀನನ್ನು.
ಕೇಳಿತದು ಅವನೆಡೆಗೆ ಬಂದು ಇಂತೆಂದು:
"ಬೇಕು, ಬೇಕಿನ್ನೇನು, ಅಜ್ಜಯ್ಯ ನಿನಗೆ?"
ಬಾಗಿ ವಂದಿಸಿ ಅದಕೆ ಮುದುಕನಿಂತೆಂದ:
"ಕ್ಷಮಿಸೆನ್ನ, ಮಹಾ ಪ್ರಭು, ಮತ್ಸ್ಯರಾಜ!
ಹುಚ್ಚಿಯಂತಾಗಿಹಳೆನ್ನ ಮಡದಿ ಮುದುಕಿ,
ಕೊಡುತಿಲ್ಲವೆನಗೊಂದು ನಿಮಿಷವೂ ಶಾಂತಿ.
ಬರಿ ರೈತ ಹೆಂಗಸಾಗಿಹುದು ಅವಳಿಗಿಷ್ಟವಿಲ್ಲಂತೆ.
ಸಿರಿವಂತ ಒಡತಿಯಾಗಬೇಕೆನ್ನುತಿಹಳು."
ಹೊನ್ನ ಮೀನಿಂತೆಂದು ಉತ್ತರವ ನೀಡಿತು:
"ಬೇಡ ಚಿಂತೆಯು ನಿನಗೆ, ಹೋಗು ಮನೆಗೆ, ಆಗಲೊಳ್ಳಿತು ನಿನಗೆ."





ಮುದುಕ ಹಿಂದಿರುಗಿದ ಮುದುಕಿ ಬಳಿಗೆ.
ಆದರಲ್ಲವ ಕಂಡುದೇನು? – ಎತ್ತರದ ಮಹಲು.
ಅಮೃತಶಿಲೆ ಮೆಟ್ಟಲ ಮೇಲೆ ಅವನ ಮುದುಕಿ.
ತೊಟ್ಟಿಹಳು ಅವಳು ಸಿರಿವಂತ ತುಪ್ಪುಳದ ಉಡುಪು.
ಅವಳ ತಲೆಯುಡಿಗೆಗಿತ್ತು ಬಂಗಾರದ ಕಸೂತಿ.
ಮುತ್ತು ರತ್ನದ ಹಾರ ಕೊರಳ ಸಿಂಗರಿಸಿತ್ತು,
ಬೆರಳುಗಳ ತುಂಬಿತ್ತು ಬಂಗಾರದುಂಗುರ.
ಆವರಿಸಿತ್ತು ಪಾದಗಳ ಮೃದು ಕೆಂಪು ರಕ್ಷೆ.
ಓಲೈಸುತಿದ್ದರವಳನು ಸೇವಕಿಯರು ಸುತ್ತಮುತ್ತ.
ಅವಳೋ ಅವರಿಗೆ ಛೀಮಾರಿ ಹಾಕಿ ದಂಡಿಸುತಿದ್ದಳು.
ಮುದುಕ ತನ್ನಯ ಮುದುಕಿ ಬಳಿ ಹೋಗಿ ಎಂದ:
"ವಂದನೆಯು ನಿನಗೆ ಒಡತಿ, ವಂದನೆಯು ರೂಪಸಿ!
ನಿನ್ನಾತ್ಮಕಿನ್ನಾದರೂ ತೃಪ್ತಿ ಬಂದಿರಬಹುದೆ?"
ಬಾಯ್ಮುಚ್ಚು ಎಂದಾಕೆ ಕೋಪದಲಿ ನುಡಿದಳು.
ಅಟ್ಟಿದಳು ಅವನ ಕುದುರೆ ಲಾಯಕ್ಕೆ ಕೆಲಸ ಮಾಡಲಿಕೆ.

ಕಳೆಯಿತು ಒಂದು ವಾರ, ಮತ್ತೂ ಒಂದು ವಾರ.
ಮುದುಕಿಯ ಜಂಭಕ್ಕೆ ಮಿತಿಯಿಲ್ಲವಾಯ್ತು.
ಕರೆ ಕಳುಹಿದಳವಳು ಒಂದು ದಿನ ಗಂಡನಿಗೆ.
ಆಜ್ಞಾಪಿಸಿದಳು ಇಂತೆಂದು:
"ಹೋಗು ಮೀನಿನ ಬಳಿಗೆ ಮತ್ತೊಮ್ಮೆ.
ಹೇಳು ವಂದಿಸಿ ಅದಕೆ ಹೀಗೆಂದು:
ಶ್ರೀಮಂತ ಒಡತಿಯಾಗಿರುವುದೆನಗಿಷ್ಟವಿಲ್ಲ.
ನಾನಾಗಲಿಚ್ಛಿಸುವೆ ರಾಣಿ – ಮಹಾರಾಣಿ."
ಮುದುಕ ಹೆದರಿದ, ಬೇಡಿಕೊಂಡ:
"ಏನು ಹೇಳುತಿರುವೆಯೆ ನೀನು, ಹುಚ್ಚು ಹಿಡಿಯಿತೆ ನಿನಗೆ!
ಒಡತಿಯಂತೆಯೆ ನೀನು ಮಾತಾಡಲಾರೆ,
ರಾಣಿಯಾಗಿನ್ನು ಜನರ ಮುಂದೆ ನಗೆಪಾಟಲಾಗುವೆ!"
ಕೋಪ ಬಂದಿತು ಮುದುಕಿಗೆ ಎಂದೂ ಬಾರದಷ್ಟು
ಹೊಡೆದಳವಳು ಗಂಡನ ಕೆನ್ನಗೆ, ಗುಡುಗಿದಳಿಂತೆಂದು:
"ಎಷ್ಟು ಧೈರ್ಯವೊ ನಿನಗೆ, ರೈತ ಭಡವ,
ನನ್ನ ಮುಂದೆಯೆ ನಿಂತು ವಾದಿಸುತ್ತಿರುವೆ?
ನಾನೊಬ್ಬ ಒಡತಿ, ತಿಳಿಯದೆ ನಿನಗೆ?



ಹೋಗು ಕೂಡಲೆ ಕಡಲ ತಡಿಗೆ
ಹೋಗದಿರೆ ಎಳೆದೊಯ್ಯುವರು ಭಟರು, ತಿಳಿಯಿತೆ?"
ಮುದುಕ ಹೊರಟನು ಕಡಲ ತಡಿಗೆ.
(ನೀಲ್ಗಡಲು ಕೆರಳಿ ಉಕ್ಕುತ್ತಿತ್ತು.)
ಅಲ್ಲಿ ನಿಂತವನು ಕೂಗಿ ಕರೆದನು ಹೊನ್ನ ಮೀನನ್ನು.
ಬಂದಿತದು ಅವನತ್ತ, ಕೇಳಿತಿಂತೆಂದು:
"ಏನು ಬೇಕು ನಿನಗೆ, ಅಜ್ಜಯ್ಯ?"
ಬಾಗಿ ವಂದಿಸಿ ಮುದುಕ ಉತ್ತರಿಸಿದ:
"ಕ್ಷಮಿಸೆನ್ನ, ಮಹಾ ಪ್ರಭು, ಮತ್ಸ್ಯರಾಜ!
ಮತ್ತೆ ಆಗಿಹಳೆನ್ನ ಮಡದಿ ಮತಿಹೀನೆ:
ಒಡತಿಯೊಡ್ಡೋಲಗವವಳಿಗೆ ಸಾಲದಂತೆ
ಅವಳಾಗಬೇಕಂತೆ ರಾಣಿ – ಮಹಾರಾಣಿ."
ಮೀನು ಹೇಳಿತು ಅದಕೆ ಉತ್ತರವ ಇಂತೆಂದು:
"ಬೇಡ ಚಿಂತೆಯು ನಿನಗೆ, ಹೋಗು ಮನೆಗೆ, ಆಗಲೊಳ್ಳಿತು ನಿನಗೆ!"





ಹಿಂದಿರುಗಿದ ಮುದುಕ ಮುದುಕಿ ಬಳಿಗೆ.
ಏನಿದೇನಿದು ? – ಇದ್ದಿತವನ ಮುಂದೊಂದು ಅರಮನೆ !
ಕಂಡನದರಲ್ಲವನು ತನ್ನ ಮಡದಿ ಮುದುಕಿಯನು.
ಕುಳಿತಿದ್ದಳವಳು ಮೇಜಿನ ಮುಂದೆ, – ಮಹಾರಾಣಿ.
ಸೇವಿಸುತಿದ್ದರವಳನು ಶ್ರೀಮಂತರು ಕುಲೀನರು,
ತುಂಬುತಿದ್ದರವಳ ಬಟ್ಟಲಲಿ ಮಧು ಮದ್ಯಗಳನು.
ಕುರುಕುತಿದ್ದಳವಳು ಸಿಹಿ ತಿಂಡಿ ತಿನಸುಗಳ
ನಿಂತಿದ್ದರವಳ ಸುತ್ತ ಮೌನದಲಿ ಸಿಡಿಮೋರೆ ರಕ್ಷಕರು.
ಹಿಡಿದಿದ್ದರವರು ಬರ್ಜಿ ಕೊಡಲಿ ಆಯುಧವ.
ಬೆರಗಾಗಿ ನೋಡಿದ ಮುದುಕ – ಬೆದರಿ ನಿಂತ !
ಅವಳ ಕಾಲಿಗೆ ಬಾಗಿ ನಮಿಸಿ ವಿನಯದಿಂದೆಂದ:
"ನಮಿಸುವೆನು ನಾ ನಿನಗೆ, ಓ ಮಹಾರಾಣಿ !
ಈಗಲಾದರು ಆಯಿತೆ ನಿನ್ನ ಆತ್ಮಕ್ಕೆ ತೃಪ್ತಿ ?"



ಆದರವಳವನತ್ತ ನೋಡಲೂ ಇಲ್ಲ.
ಹೊರಗಟ್ಟಿ ಅವನನೆಂದಾಜ್ಞಾಪಿಸಿದಳು.
ಕುಲೀನರೂ ಶ್ರೀಮಂತರೂ ಹೊಡೆದಟ್ಟಿದರು ಅವನ.
ಸೀಳಿ ಹಾಕುವುದಾಗಿ ಬರ್ಜಿ ಮುಂದೂಡಿದರು ದ್ವಾರಪಾಲಕರು.
ಜನರೆಲ್ಲ ಮುದುಕನನು ಗೇಲಿ ಮಾಡಿದರು:
"ಸರಿಯಾಗಿ ಆಯಿತು ನಿನಗೆ, ಮುದಿಗೊಡ್ಡೆ.
ಕಲಿಸುವುದು ನಿನಗಿದು ತಕ್ಕ ಪಾಠವನು
ಮುಂದಾದರೂ ಅರಿತಿರುವಂತೆ ನೀ ನಿನ್ನ ಸ್ಥಾನವನು!"

ಹೀಗೆ ಕಳೆಯಿತು ಒಂದು ವಾರ, ಮತ್ತೂ ಒಂದು ವಾರ.
ಮುದುಕಿಯ ಅಹಂಕಾರ ಹಿಗ್ಗುತ್ತಲೇ ಹೋಯ್ತು.
ಒಂದು ದಿನ ಅವಳು ಗಂಡನಿಗೆ ಕರೆ ಕಳುಹಿದಳು,
ಅವಳ ಸೇವಕಿ ಅವನ ಕರೆತಂದು ನಿಲಿಸಿದಳು.

ಮುದುಕಿ ಹೇಳಿದಳು ಮುದುಕನಿಗೆ:
"ಹೋಗು, ಹೋಗು ಮೀನಿನ ಬಳಿಗೆ, ಹೇಳು ಹೀಗೆಂದು:
ಮಹಾರಾಣಿಯಾಗಿರುವುದೆನಗಿಷ್ಟವಿಲ್ಲೆಂದು,
ಸಾಗರಗಳ ರಾಣಿಯಾಗಿರಬೇಕೆಂಬುದೆನ್ನಾಸೆ,
ನನ್ನ ಮನೆ ಇರಬೇಕು ನೀಲ್ಗಡಲ ಮಧ್ಯೆ,
ಹೊನ್ನ ಮೀನಾಗಿರಬೇಕು ಎನ್ನ ಅನುಚರ,
ಕೇಳಬೇಕದು ನನ್ನ ಅಜ್ಞೆಗಳನು,
ಮಾಡಬೇಕದು ನಾನು ಹೇಳಿದುದನೆಲ್ಲ."

ಆಗದೆನ್ನಲು ಮುದುಕನಿಗೆ ಧೈರ್ಯ ಬರಲಿಲ್ಲ.
ಆಗಲೆಂದೆನ್ನಲೂ ತುಟಿ ತೆರೆಯಲಿಲ್ಲ.
ಕಡುದುಃಖದಲಿ ಹೊರಟ ಕಡಲ ತಡಿಗೆ.
ಚಂಡಮಾರುತ ಬೀಸುತಿತ್ತು ಸಾಗರದಲ್ಲಿ,
ಬೆಟ್ಟದೆತ್ತರ ಅಲೆಗಳೇಳುತಿದ್ದವು.
ಭುಗಿಲೆದ್ದಿತ್ತು ಬಡಬಾಗ್ನಿ ಕಡಲ ಒಡಲಲ್ಲಿ.



ಕೂಗಿ ಕರೆದನು ಅವನು ಹೊನ್ನ ಮೀನನ್ನು
ಬಂದಿತದು ಅವನೆಡೆಗೆ, ಕೇಳಿತಿಂತೆಂದು:
"ಏನು ಬೇಕಜ್ಜ, ನಿನಗಿನ್ನೇನು ಬೇಕು?"
ಅದಕೆ ವಂದಿಸಿ ಮುದುಕ ಉತ್ತರವನಿತ್ತ:
"ಕ್ಷಮಿಸೆನ್ನ ಮಹಾ ಪ್ರಭು, ಮತ್ಸ್ಯರಾಜ!
ನಾನೇನು ಮಾಡಲೀ ಹಾಳು ಮುದುಕಿಯ ಬವಣೆ.
ಅವಳಿಗಾಗಲೇ ಮಹಾರಾಣಿಯಾಗಿ ಬೇಸರವಂತೆ.
ಆಗಬೇಕಂತವಳು ಸಾಗರಗಳ ರಾಣಿ.
ಅವಳ ಮನೆ ಇರಬೇಕಂತೆ ನೀಲ್ಗಡಲ ಮಧ್ಯೆ,
ನೀನಾಗಬೇಕಂತೆ ಅವಳ ಅನುಚರ.
ಅವಳಾಜ್ಞೆಗಳ ನೀನು ಪಾಲಿಸಲೇಬೇಕಂತೆ."
ಹೊನ್ನ ಮೀನು ಆಡಲಿಲ್ಲ ಉತ್ತರವಾಗಿ ಒಂದು ಮಾತೂ.
ಬಾಲವನ್ನೊಮ್ಮೆ ಬಡಿದು ಅದು ಮೌನದಲ್ಲಿ
ಕಣ್ಮರೆಯಾಯ್ತು ಕಡಲ ಗರ್ಭದಲ್ಲಿ.
ಮುದುಕ ಉತ್ತರಕಾಗಿ ಕಾದು ನಿಂತ,
ಉತ್ತರವು ಬಾರದೆ ನಿರುತ್ಸಾಹದಿಂದರಮನೆಗೆ ಹೊರಟ
ಅಯ್ಯೋ, ನೋಡಿ ಏನಾಗಿಹುದು –
ಅರಮನೆಯಿದ್ದ ಬಳಿ ನಿಂತಿಹುದು ಮುರುಕಲು ಜೋಪಡಿ.
ಕುಳಿತಿಹಳು ಹೊಸ್ತಿಲ ಮೇಲೆ ಅವನ ಮಡದಿ ಮುದುಕಿ,
ಅವಳ ಮುಂದಿಹುದದೇ ಹಳೆಯ ಮುರುಕಲು ತೊಟ್ಟಿ.



ಚಿತ್ರಗಳು: ಬರೀಸ್ ದೆಹ್‌ತೆರೆವ್
ಅನುವಾದ: ಕೆ.ಎಲ್. ಗೋಪಾಲಕೃಷ್ಣರಾವ್

ಪ್ರಗತಿ ಪ್ರಕಾಶನ
ಮಾಸ್ಕೋ



А. С. Пушкин
СКАЗКА О РЫБАКЕ И РЫБКЕ
На каннада

A. PUSHKIN
The Fischerman and the Goldfish

ಸೋವಿಯತ್ ಒಕ್ಕೂಟದಲ್ಲಿ ಮುದ್ರಿತವಾದುದು

$\text{П}\,\frac{70802\text{-}175}{014(01)\text{-}82}$ 601-82 4803010101